# ರೇಖಾ ಕಾಖಂಡಕಿ



ಚಿತ್ರ: ಡಿ.ಸಿ. ನಾಗೇಶ್

ತಮ್ಮ ಕತೆ, ಕಾದಂಬರಿಗಳಲ್ಲಿ ಮಧ್ಯಮವರ್ಗದ ಬದುಕು, ಪ್ರಾದೇಶಿಕ ಹಿನ್ನೆಲೆಯ ಚಿತ್ರಣಕೊಟ್ಟ ರೇಖಾ ಕಾಖಂಡಕಿ ಓದುಗರ ಪ್ರೀತಿ ಗಳಿಸಿದ ಲೇಖಕಿ. ಅವರು ಬಾಗಲಕೋಟೆಯವರು. ಅಲ್ಲಿನ ಪಾಣಿಮಹಲ್ ಶಾಲೆಯಲ್ಲಿ ಆರಂಭಿಕ ಶಿಕ್ಷಣ ಪಡೆದ ಅವರು, ಬೆಂಗಳೂರಿನಲ್ಲಿ ಪ್ರೌಢ ಹಾಗೂ ಪದವಿ ಶಿಕ್ಷಣ ಪಡೆದರು. ಅವರು ಬರೆದ ಮೊದಲ ಕಾದಂಬರಿ 'ಕೋಟೆ'. ಬಳಿಕ 'ಬಂಧನ', 'ಅರುಣರಾಗ', 'ಹೊಸಹೆಜ್ಜೆ' ಕಾದಂಬರಿಗಳು ಜನಮನ್ನಣೆ ಗಳಿಸಿದವು. 'ಅರುಣರಾಗ' ಕಾದಂಬರಿ ಕೆ.ವಿ. ಜಯರಾಮ್ ನಿರ್ದೇಶನದಲ್ಲಿ ಸಿನಿಮಾ ಆಯಿತು. 'ಇದ್ದೂ ಇಲ್ಲದ ಸಂಬಂಧಗಳು' ಕಾದಂಬರಿ 'ಮಹಾನವಮಿ' ಎಂಬ ಟೀವಿ ಧಾರಾವಾಹಿಯಾಗಿ ಜನಪ್ರಿಯತೆ ಗಳಿಸಿತು. 'ಹೊಸ ಹೆಜ್ಜೆ', 'ಬಂಧನ', 'ತೇಲಿ ಹೋದ ನೌಕೆ', 'ಕಪ್ಪುತೆರೆ', 'ಆಡಿಸಿದಳು ಯಶೋದೆ' ಕೃತಿಗಳೂ ಧಾರಾವಾಹಿಯಾಗಿವೆ. ಅವರು ಸುಮಾರು 35 ಕಾದಂಬರಿಗಳನ್ನು ಪ್ರಕಟಿಸಿದ್ದಾರೆ. 'ದತ್ತು ಮಾಸ್ತರ' ಕೃತಿಯು ಆಕಾಶವಾಣಿಯಲ್ಲಿ ನಾಟಕವಾಗಿ ಪ್ರಸಾರಗೊಂಡಿದೆ. 'ಇದ್ದೂ ಇಲ್ಲದ ಸಂಬಂಧಗಳು' ಆಲಮಟ್ಟಿ ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಡೆಯಾದ ಬಾಗಲಕೋಟೆ ಜನರ ಮಾನಸಿಕ ತೊಳಲಾಟಗಳು, ಸಂಕಟಗಳನ್ನು ಚಿತ್ರಿಸುತ್ತದೆ. ಇತ್ತೀಚೆಗೆ ಪ್ರಕಟವಾದ ಅವರ ಕಾದಂಬರಿ 'ವೈವಸ್ವತ' ಓದುಗರ ಗಮನ ಸೆಳೆದಿದೆ. ರೇಖಾ, ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.

ಬೇವೂರ ಕತ್ತರಿ ದಾಟಿ ಹ್ವಾದರ್‍ರಿ... ನಾ ಗಳೆ ಹೊಡೆಯಾಕ ಹೊಂಟಿದ್ನಿ... ಯವ್ವಾರ... ಕೈ ಬಿಸಗೊಂಡು ಹೊಂಟಿದ್ರ ಯಾಕ್ರಯಪ್ಪಾ... ಈಟ ನಸಕನ್ಯಾಗ ಅಂದ್ನ–

'ಬೇವೂರಿನ ಋಣ' ಮುಗಿತಲೇ ಸಿದ್ದ...' ಎಂದು ಕೈ ತಿರುವಿ ಮಾಯ ಆದ್ರಿ... ನನಗ ಗಾಬ್ರಿ ಆಯತ್ರಿ ನಿಮ್ಮ ಕೂಡ ಹೇಳ್ಯಾಕ... ಬಂದ್ನಿ' ಎಂದು ಹೇಳುತ್ತಿದ್ದಂತೆ ಅಚ್ಚಕ್ಕ ಧ್ವನಿ ತೆಗೆದು ಅಳಹತ್ತಿದ್ದಳು. ಹೊರಗೆಹೋದ ಹುಡುಗರು ಮತ್ತೆ ಒಳ ಬಂದು 'ಅವ್ವಾ... ಹಸಿವ್ಯಾಗದ ಅಡಗಿ ಮಾಡವಾ' ಎನ್ನುತ್ತಿದ್ದಂತೆ ಅಚ್ಚಕ್ಕ ರೋಸಿನಿಂದ,

'ಸುಟ್ಟ ಬರ್ಲಿ... ಎಂಥಾ ಹಸಿವಿ. ನನ್ನ ಹರಕೊಂಡ ತಿನ್ರಿ' ಎಂದು ಎರಡೇಟು ಹಾಕಿ ಕಳುಹಿಸಿದ್ದಳು.

ಮುಂದೆ ಎರಡು ದಿನಗಳೂ ಅಚ್ಚಕ್ಕ ಹಣೆಗೆ ಕೈಯಿಟ್ಟು ಕುಳಿತವಳು. ಬಾಣಗದಿನ್ನಿಯಿಂದ ಬಂಡೆಪ್ಪ ಬಂದಾಗಲೇ ಹೊಸ ಜೀವ ಬಂದಂತಾಯ್ತು. ಬಂಡೂಮಾಮ ಬಂದು ಪಡಸಾಲೆಯ ಅಂಚಿಗೆ ಕುಳಿತು ಗಾಂಧಿ ಟೊಪ್ಪಿಗೆ ತೆಗೆದು ಮೊಳಕಾಲ ಮೇಲಿಟ್ಟುಕೊಂಡು, ತಲೆಯ ಮೇಲೆ ಕೈಯಾಡಿಸಿಕೊಳ್ಳುತ್ತ ಕೇಳಿದ್ದ. 'ಅಚ್ಚಕ್ಕ ಯಾಕ ಹಿಂಗಿದ್ವಿ. ಹುಡುಗರ್‍ಯಾಕ ಹಿಂಗ್ ಕೂತಾವ' ಎನ್ನುತ್ತಿದ್ದಂತೆ ಅಚ್ಚಕ್ಕ ಧ್ವನಿ ತೆಗೆದು,

'ಬಂಡ್ಯಾ, ಅವರು ಹಿಂಗ ಮಾಡಬೇಕೇನೊ ಏನೋ ಸಂಸಾರ ಅಂದಮ್ಯಾಲೆ ಎರಡ ಮಾತ– ಬರ್ತಾವ ಹೋಗ್ತಾವ, ಈಗ ಇಬ್ಬರ್‍ನೂ ನನ್ನ ಕೊಳ್ಳಾಗ ಕಟ್ಟಿ ದೇಶಾಂತರ ಹೋಗಿ ಬಿಟ್ಟಾರ. ನಾ